

# ರಚನಾ ಫಾರ್ಮುಲಾ

**ಚಿತ್ರರಂಗಕ್ಕೆ ಕಾಲಿಟ್ಟ ಹೊಸತರಲ್ಲೇ ಹಲವು ಸಿನಿಮಾ ಅವಕಾಶಗಳನ್ನು ಗಳಿಸಿಕೊಂಡಿದ್ದ ನಟಿ ರಚನಾ ಇಂದರ್ ಸದ್ಯ 'ಫೈರ್ ಫ್ಲೈ' ಚಿತ್ರದಲ್ಲಿ ತೊಡಗಿಕೊಂಡಿದ್ದಾರೆ. ಈಚೆಗೆ ಎಂಬಿಎ ಮುಗಿಸಿದ್ದು, ಸಂಪೂರ್ಣವಾಗಿ ಸಿನಿಮಾಗಳತ್ತ ಚಿತ್ತ ಹರಿಸಿದ್ದಾರೆ.**

■ ಸುಮಲತಾ ಎನ್

"ಲವ್ ಮಾಕ್ಟೇಲ್' ಸಿನಿಮಾ ಹುಡುಗಿಯನ್ನು ಜನ ನನ್ನ ಇನ್ನೊಂದು ಸಿನಿಮಾದಲ್ಲಿ ನೋಡಬಾರದು. ಆ ಸಿನಿಮಾದಲ್ಲಿ ಬೇರೆಯದೇ ಹುಡುಗಿಯನ್ನು ನೋಡಬೇಕು, ಮೆಚ್ಚಬೇಕು. ಹೀಗಾಗಿ ಸಿನಿಮಾ ಆಯ್ಕೆ ಮಾಡುವಾಗ ನನ್ನ ಗಮನ ಅತ್ತ ಇದ್ದೇ ಇರುತ್ತದೆ. ಭಿನ್ನ ಪಾತ್ರ ಎಲ್ಲ ಕಲಾವಿದರ ಆದ್ಯತೆಯಾಗಿದ್ದರೂ ಕೊಟ್ಟ ಪಾತ್ರದಲ್ಲಿ ಭಿನ್ನತೆ ತೋರಬೇಕಿರುವುದೂ ಸವಾಲೇ..."

ಸದ್ಯ 'ಫೈರ್ ಫ್ಲೈ' ಸಿನಿಮಾದಲ್ಲಿ ಬ್ಯುಸಿಯಾಗಿರುವ ನಟಿ ರಚನಾ ಇಂದರ್, ತಮಗೆ ಸಿಕ್ಕಿರುವ, ಸಿಗುತ್ತಿರುವ ಪಾತ್ರಗಳ ಬಗ್ಗೆ ಹೀಗೊಂದು ತಮ್ಮ ವಿಶ್ಲೇಷಣೆ ಮುಂದಿಡುತ್ತಾರೆ. ತಮ್ಮ ಪಾತ್ರಗಳು ತಮಗೆ, ಹಾಗೇ ಜನರಿಗೆ ಏಕತಾನತೆ ಅನ್ನಿಸುವುದನ್ನು ತಪ್ಪಿಸಲು ಅನುಸರಿಸುವ ಮಾರ್ಗದ ಬಗ್ಗೆಯೂ ಮಾತನಾಡಿದ್ದಾರೆ.

'ನನಗೆ ಸಿಕ್ಕ ಮೊದಲ ಪಾತ್ರ, ಸಿನಿಮಾದಲ್ಲೇ ನಿರೀಕ್ಷೆಗಿಂತ ತುಂಬಾ ಅಟೆನ್ಷನ್ ಸಿಕ್ಕಿಬಿಟ್ಟಿತ್ತು. ಚಟಪಟ ಮಾತಾಡುವ, ಬಬ್ಲಿ ಬಬ್ಲಿ ಹುಡುಗಿ ಪಾತ್ರಗಳಲ್ಲಿ ಜನರ ಮನಸ್ಸಿನಲ್ಲಿ ಉಳಿದೆ. ಅಂಥದ್ದೇ ಇನ್ನೊಂದೆರಡು ಪಾತ್ರಗಳನ್ನು ಮಾಡಿದ್ದರೂ ಅಂಥ ಪಾತ್ರಗಳಲ್ಲೇ ನನ್ನನ್ನು ಜನ ನಿರೀಕ್ಷಿಸಲು ಆರಂಭಿಸುತ್ತಿದ್ದರು. ಆ ಒಂದು ಇಮೇಜ್‌ನಿಂದ ಹೊರಬರಬೇಕು. ಇದಕ್ಕೆ 'ಲವ್ 360', 'ಹರಿಕಥೆ ಅಲ್ಲ ಗಿರಿಕಥೆ' ಸಿನಿಮಾಗಳು ಅವಕಾಶ ಮಾಡಿಕೊಟ್ಟವು. ಪ್ರತಿ ಸಿನಿಮಾದಲ್ಲಿಯೂ ಭಿನ್ನ ಪಾತ್ರ ಸಿಗಬೇಕೆಂಬುದು ನಮ್ಮ ಕೈಯಲ್ಲಿರೋಲ್ಲ. ಆದರೆ ಸ್ಕ್ರಿಪ್ಟ್ ಬಂದಾಗ ನಾನು ಈ ಹಿಂದೆ ನನಗೆ ಸಿಕ್ಕಿರುವ ಪಾತ್ರಗಳನ್ನು ತಾಳೆ ಹಾಕುತ್ತೇನೆ. ಒಂದೇ ರೀತಿ ಅನಿಸಿದರೆ ದೂರ ಉಳಿಯುತ್ತೇನೆ' ಎಂದು ವಿವರಿಸುತ್ತಾರೆ.

ಓದುವಾಗಲೇ ಸಿನಿಮಾರಂಗದತ್ತ ಹೆಜ್ಜೆ ಇಟ್ಟಿದ್ದ ರಚನಾ, 'ಲವ್ ಮಾಕ್ಟೇಲ್', 'ಹರಿಕಥೆ ಅಲ್ಲ ಗಿರಿಕಥೆ', 'ಲವ್ 360', 'ತ್ರಿಬಲ್ ರೈಡಿಂಗ್' ಹೀಗೆ ಹಲವು ಸಿನಿಮಾ ಅವಕಾಶಗಳನ್ನು ಗಿಟ್ಟಿಸಿಕೊಂಡರು. ಈಚೆಗೆ ಅಪ್ಪ ಅಮ್ಮನ ಆಸೆಯಂತೆ ಎಂಬಿಎ ಮುಗಿಸಿದ್ದಾರೆ. ಸದ್ಯ ಸಿನಿಮಾದತ್ತಲೇ ತಮ್ಮ ಗಮನವನ್ನು ಸಂಪೂರ್ಣವಾಗಿ ನೀಡಿರುವುದಾಗಿ ಹೇಳಿದ್ದಾರೆ.

ಸಿನಿಮಾರಂಗಕ್ಕೆ ಬಂದ ಆರಂಭದಲ್ಲೇ ಒಳ್ಳೆಯ ಅವಕಾಶಗಳು ತಮಗೆ ಸಿಕ್ಕಿದ್ದನ್ನು ಸ್ಮರಿಸಿಕೊಳ್ಳುವ ರಚನಾ, ಉತ್ತಮ ನಿರ್ದೇಶಕರು, ನಟರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿದ್ದು ತಮ್ಮ ಸಿನಿ ಬದುಕಿಗೆ ಒಳ್ಳೆಯ ಬುನಾದಿ ಹಾಕಿಕೊಟ್ಟಿತು ಎನ್ನುತ್ತಾರೆ.

'ಸಿನಿಮಾರಂಗಕ್ಕೆ ಬಂದ ಆರಂಭದ ದಿನಗಳಲ್ಲೇ ಒಳ್ಳೆಯ ನಿರ್ದೇಶಕರೊಂದಿಗೆ, ನಟರೊಂದಿಗೆ ಕೆಲಸ ಮಾಡಿಕೊಂಡು ಬಂದಿದ್ದೇನೆ. ಅನುಭವಿ ನಿರ್ದೇಶಕರೊಂದಿಗೆ ಕೆಲಸ ಮಾಡುವುದು ಎಷ್ಟು ಮುಖ್ಯ ಎಂಬುದು ನನಗೆ ತಿಳಿಯಿತು. ಇದು ಹೊಸಬರಲ್ಲಿ ಆತ್ಮವಿಶ್ವಾಸ ತುಂಬುತ್ತದೆ. ಕಲಿಕೆಗೆ ಸಾಕಷ್ಟು ಅವಕಾಶವಿರುತ್ತದೆ. ಉತ್ತಮ ನಿರ್ದೇಶಕರೊಂದಿಗೆ ನಮ್ಮ ಸಿನಿಮಾ ಜರ್ನಿ ಆರಂಭವಾದರೆ ಗಟ್ಟಿಯಾದ ತಳಹದಿ ರೂಪುಗೊಂಡಂತೆ' ಎಂದು ತಮ್ಮ ಅನುಭವಗಳನ್ನು ತೆರೆದಿಟ್ಟಿದ್ದಾರೆ.

ಸ್ಕ್ರಿಪ್ಟ್‌ಗಳ ಆಯ್ಕೆಯಲ್ಲೂ ತಾವು ಆದ್ಯತೆ ನೀಡುವುದು ನಿರ್ದೇಶಕರಿಗೇ ಎಂದು ಹೇಳುತ್ತಾರೆ.

'ಸ್ಕ್ರಿಪ್ಟ್ ಬಂದಾಗ ನಿರ್ದೇಶಕರು ಯಾರು ಎಂಬುದನ್ನು ತಿಳಿದುಕೊಳ್ಳುತ್ತೇನೆ. ನಂತರ ಈ ಸಿನಿಮಾಗೆ ನನ್ನನ್ನು ಏಕೆ ಆಯ್ಕೆ ಮಾಡಿಕೊಂಡರು ಎನ್ನುವ ಅಂಶವನ್ನು ತಿಳಿದುಕೊಳ್ಳುತ್ತೇನೆ. ಸಿನಿಮಾ ಪ್ರಕ್ರಿಯೆಯಲ್ಲಿ ನಿರ್ದೇಶಕರೊಂದಿಗೆ ನಾನು ನನ್ನ ಆಲೋಚನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಸಾಧ್ಯವಿದೆಯೇ ಎಂಬುದನ್ನು ಗಮನಿಸುತ್ತೇನೆ. ಇವೆಲ್ಲದರ ನಂತರವೇ ಸಿನಿಮಾ ಮಾಡುತ್ತೇನೆ' ಎನ್ನುತ್ತಾರೆ.

ಸದ್ಯ ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣದ, ವಂಶಿ ನಿರ್ದೇಶನ, ನಟನೆಯ 'ಫೈರ್ ಫ್ಲೈ' ಸಿನಿಮಾದಲ್ಲಿ ಪುಟ್ಟ ಪಾತ್ರ ಮಾಡುತ್ತಿದ್ದು, ಪುಟ್ಟದಾದರೂ ಪರಿಣಾಮಕಾರಿ ಪಾತ್ರದಲ್ಲಿ ತೊಡಗಿಕೊಂಡಿರುವುದಾಗಿ ಖುಷಿಯಿಂದ ಹೇಳಿಕೊಳ್ಳುತ್ತಾರೆ.

ಈಚೆಗೆ ರೊಮ್ಯಾಂಟಿಕ್ ಕಾಮಿಡಿ, ಥ್ರಿಲ್ಲರ್ ಸಿನಿಮಾಗಳತ್ತ ವಿಶೇಷ ಆಸಕ್ತಿಯೂ ತಮ್ಮಲ್ಲಿ ಮೂಡಿದ್ದು, ಡ್ರಮಾಟಿಕ್‌ಗಿಂತ 'ಲೈಟ್ ಹಾರ್ಟೆಡ್' ಪಾತ್ರಗಳೆಡೆಗೆ ಗಮನ ನೀಡುತ್ತಿದ್ದಾರಂತೆ. 'ಫೈರ್ ಫ್ಲೈ' ಹೊರತಾಗಿ, 'ನಾನು ಮತ್ತು ಗುಂಡ' ಎಂಬ ಸಿನಿಮಾದಲ್ಲಿ ರಚನಾ ನಟಿಸಿದ್ದು, ಸಿನಿಮಾ ಬಿಡುಗಡೆಗೆ ಸಿದ್ಧವಾಗುತ್ತಿದೆ. ಇನ್ನೊಂದು ಸಿನಿಮಾಗೂ ಸಹಿ ಹಾಕಿದ್ದು, ಶೀಘ್ರದಲ್ಲಿಯೇ ಆ ಸಿನಿಮಾ ಚಿತ್ರೀಕರಣವೂ ಆರಂಭವಾಗಲಿದೆ. ■